# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 385 (397) |
| ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್)<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 10-12-2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯಲ್ಲಿ ಕೆ.ಜಿ.ಎಫ್. ತಾಲ್ಲೂಕನ್ನು ಹೊಸದಾಗಿ ರಚಿಸಿದ್ದು ಯಾವಾಗ; ಈ ಹೊಸ ತಾಲ್ಲೂಕಿಗೆ ಸೇರಿಸಿರುವ ಹೋಬಳಿಗಳ ಸಂಖ್ಯೆ ಮತ್ತು ಗ್ರಾಮಗಳ ಸಂಖ್ಯೆ ಎಷ್ಟು; | ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 121 ಭೂದಾಪು 2017, ದಿನಾಂಕ: 29-01-2018 ರಂತೆ ಕೆ.ಜಿ.ಎಫ್. ತಾಲ್ಲೂಕು ರಚನೆಯಾಗಿದೆ.<br>ಸದರಿ ತಾಲ್ಲೂಕು 3 ಹೋಬಳಿಗಳು ಮತ್ತು 188 ಗ್ರಾಮಗಳನ್ನು ಒಳಗೊಂಡಿದೆ. |
| ಆ) | ಘಟ್ಟಕಾಮದೇನಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ 08 ಗ್ರಾಮಗಳ ನಾಗರಿಕರು ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಕೆ.ಜಿ.ಎಫ್. ತಾಲ್ಲೂಕಿಗೆ ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲಿ, ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು; | ಬಂದಿದೆ.<br>ಘಟ್ಟಕಾಮದೇನಹಳ್ಳಿ ಗ್ರಾಮ ಪಂಚಾಯಿತಿಯು ಕೆ.ಜಿ.ಎಫ್. ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಸಾರ್ವಜನಿಕರು ಸರ್ಕಾರಿ ಸೇವೆಗಳನ್ನು ಸದರಿ ತಾಲ್ಲೂಕಿನಿಂದ ಪಡೆಯುತ್ತಿದ್ದಾರೆ. |
| ಇ) | ಘಟ್ಟುಕಾಮದೇನಹಳ್ಳಿ ಗ್ರಾಮ ಪಂಚಾಯಿತಿಗೆ<br>ಸೇರಿದ 08 ಗ್ರಾಮಗಳನ್ನು ಕೆ.ಜಿ.ಎಫ್. ತಾಲ್ಲೂಕಿಗೆ ಸೇರಿಸಲು ಸರ್ಕಾರದ ನಿಲುವುಗಳೇನು; | ಘಟ್ಟುಕಾಮದೇನಹಳ್ಳಿ ಗಾಮ ಪಂಚಾಯಿತಿಯು ಪ್ರಸ್ತುತ ಕೆ.ಜಿ.ಎಫ್. ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿರುತ್ತದೆ. |
| ಈ) | ಈ ಗ್ರಾಮಗಳು ಯಾವ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುತ್ತದೆ ಹಾಗೂ ಈ ಗ್ರಾಮಗಳ ಅಭಿವೃದ್ಧಿಗಾಗಿ ಇದುವರೆವಿಗೂ ಬಿಡುಗಡೆಯಾದ ಅನುದಾನ ಎಷ್ಟು; ಯಾವ- ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ? ( ಮಾಹಿತಿ ನೀಡುವುದು) | ಘಟ್ಟಕಾಮದೇನಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಘಟ್ಟಕಾಮಧೇನಹಳ್ಳಿ, ಪಿಚ್ಚಹಳ್ಳಿ, ಕುಡಗಲ್ಲೂ, ಕೃಷ್ಣರಾಜಪುರ, ಮೇಲ್ ಕೃಷ್ಣರಾಜಪುರ, ಪೆದ್ದಪಲ್ಲಿ, ಘಟ್ಟರಾಗಡಹಳ್ಳಿ, ಕೊತ್ತೂರು, ಈ 8 ಗ್ರಾಮಗಳು ಬಂಗಾರಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುತ್ತವೆ. ಸದರಿ ಗ್ರಾಮಗಳಿಗೆ ಇದುವರೆಗೂ ರೂ. 48,23,150/- ಮತ್ತು ನರೇಗಾ ಯೋಜನೆಯಲ್ಲಿ 75,08,500/-ಗಳ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನದಲ್ಲಿ ರಸ್ತೆ ಕಾಮಗಾರಿ, ಚರಂಡಿ ಕಾಮಗಾರಿ, ಬೀದಿ ದೀಪಗಳು, ಕುಡಿಯುವ ನೀರು ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. |

**ಸಂಖ್ಯೆ: ಕಂಇ 57 ಎಲ್ಆರ್‌ಡಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು